**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 1186-2022**

**ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ -2**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ಗಣೇಶ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕರ್ಕಿ ಕೊಪ್ಪ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ : 18.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ದಿಃ10.05.2022 ರಂದು ನಾನು ಚಾಸ 1 ರವರ ತೋಟದಲ್ಲಿ ಗಲಾಟೆ ಆಗಿದ್ದ ಕಾರಣ ಸಾಕ್ಷಿಗೆಂದು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ 2 ಮತ್ತು 5 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು 5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ- ಸ.ಸ.ಅ. ರವರಿಂದಃ-**

1. ಪೊಲೀಸರು ಪಂಚನಾಮೆಗೆಂದು ಬಂದಾಗ ಚಾಸ 1 ರವರು ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನನ್ನ ಹಾಗೂ ಚಾಸ 3 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಪಂಚನಾಮೆಗೆ ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಬಿ.ಎಂ. ವಕೀಲರಿಂದಃ-**

1. ನಾನು ಕರ್ಕಿಕೊಪ್ಪ ಗ್ರಾಮದ ವಾಸಿ. ಚಾಸ 1, 4 ಮತ್ತು 5 ರವರು ನಮ್ಮ ಗ್ರಾಮದ ವಾಸಿಗಳು ಎಂದರೆ ಸರಿ. ಪೊಲೀಸರು ಮಹಜರ್ ಮಾಡುವ ಸ್ಥಳಕ್ಕೆ ನಾನು ಬೆಳಿಗ್ಗೆ 9 ಗಂಟೆಗೆ ಹೋಗಿರುತ್ತೇನೆ. ಪೊಲೀಸರು ಸ್ಥಳಕ್ಕೆ 12 ಗಂಟೆಗೆ ಬಂದಿರುತ್ತಾರೆ. ಮಹಜರ್ ಗೆ ಬರಬೇಕೆಂದು ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಮಹಜರ್ ಅನ್ನು ಯಾವ ಪೊಲೀಸರು ಬರೆದರು ಎಂದು ನನಗೆ ಗೊತ್ತಿಲ್ಲ. ಮಹಜರ್ ಅನ್ನು ನಾನು ಹೇಳಿ ಬರೆಸಿರುವುದಿಲ್ಲ. ಚಾಸ 3 ಮಹಜರ್ ಅನ್ನು ಹೇಳಿ ಬರೆಸಿರುವುದಿಲ್ಲ. ಮಹಜರ್ ಅನ್ನು ಯಾರು ಹೇಳಿ ಬರೆಸಿದರು ಎಂದು ನನಗೆ ಗೊತ್ತಿಲ್ಲ. ಕೃತ್ಯ ನಡೆದಿದೆ ಎಂದು ಹೇಳುತ್ತಿರುವ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

2. ಚಾಸ 1 ರವರ ಗಂಡನ ಹೆಸರು ಮಹದೇವ. ನಾನು ಚಾಸ 4 ರವರ ಲಾರಿಯಲ್ಲಿ ಮರಳು ತುಂಬುವ ಹಮಾಲಿಯಾಗಿ ಕೆಲಸ ಮಾಡುತ್ತೇನೆ. ಚಾಸ 3 ಸಹ ಚಾಸ 4 ರವರ ಲಾರಿಯಲ್ಲಿ ಮರಳು ತುಂಬುವ ಹಮಾಲಿಯಾಗಿ ಕೆಲಸ ಮಾಡುತ್ತಾನೆ. ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 120 ಮತ್ತು 121 ರಲ್ಲಿರುವ ಆರೋಪಿತರ ತೋಟವನ್ನು ನಾನು ನೋಡಿರುವುದಿಲ್ಲ. ಚಾಸ 1 ರವರ ತೋಟದಲ್ಲಿ ಅಡಿಕೆ ಕೊಯ್ಲಿಗೆ ಬಂದಿತ್ತು. ಅಡಿಕೆ ತೋಟದಲ್ಲಿ 1200 ಅಡಿಕೆ ಮರಗಳಿರುತ್ತವೆ. ಎಲ್ಲಾ ಅಡಿಕೆ ಮರಗಳು ಫಸಲಿಗೆ ಬಂದಿದ್ದವು. ನಿಪಿ 3 ಮತ್ತು 4 ರಲ್ಲಿ ಫಸಲು ಬಂದಿರುವ ಅಡಿಕೆ ಮರ ಕಾಣುವುದಿಲ್ಲ ಎಂದರೆ ಸರಿ. ಚಾಸ 4 ರವರಿಗೆ ಸಹಾಯವಾಗಲಿ ಎಂದು ಅವರು ನನ್ನ ಮಾಲೀಕರಾಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**